ದಿನಾಂಕಃ 27-08-2024 ರಂದು ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು..

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂಹೆಚ್ ವಕೀಲರಿಂದ.

ದಿನಾಂಕಃ 15-09-2018 ರಂದು ಈ ಪ್ರಕರಣದ ಕಡತ ನನ್ನ ಬಳಿ ಬಂದಿದೆ. ಕಡತ ಪಡೆದುಕೊಂಡ ನಂತರ ನಾನೇ ಆ ಸಂಬಂಧ ಕೆಲಸ ನಿರ್ವಹಿಸಬೇಕಿರುತ್ತದೆ. 2018-2019 ನೇ ಸಾಲಿನ ಮಾನ್ಯತೆ ನವೀಕರಣ ಮಾಡಬೇಕೆಂದು ಕೋರಿದ್ದಾರೆ. ಟಿಪ್ಪಣಿ ಕೂಡ ಅದೇ ವರ್ಷಕ್ಕೆ ಮಾಡಲಾಗಿದೆ. ಅಕ್ಷಯ ಇಂಟರ್ ನ್ಯಾಷನಲ್ ಅವರು ಅರ್ಜಿಯನ್ನು 2018-2019 ರ ಸಾಲಿಗೆ ನವೀಕರಣ ಮಾಡಿ ಎಂದು ಕೊಟ್ಟಿದ್ದಾರೆ. ನಿಡಿ-1 ನ್ನು ಕಡತದಲ್ಲಿ ನೋಡಿದ್ದೇನೆ. ದಿನಾಂಕಃ 15-09-2018 ರಂದು ನೋಡಿದ್ದೇನೆ. ದಿನಾಂಕಃ 03-11-2018 ರಂದು ನಿಡಿ-1 ದಾಖಲೆ ಲೋಕಾಯುಕ್ತ ಪೊಲೀಸರು ಪಡೆದಿದ್ದಾರೆ. ನಿಪಿ-1 ಕೂಡ ಕಡತದಲ್ಲಿತ್ತು. ನಿಡಿ-1 ಮತ್ತು ನಿಪಿ-1 ರ ಅಂಶಗಳು ಒಂದೇ ಇರುತ್ತವೆ. ನಿಪಿ-1 ರಲ್ಲಿ ತಿಂಗಳನ್ನು ತಿದ್ದಿದಂತೆ ಕಂಡು ಬರುತ್ತದೆ. ಆ ರೀತಿ ನಿಡಿ-1 ರಲ್ಲಿ ಕಂಡು ಬರುವುದಿಲ್ಲ. ನಿಪಿ-1 ರಲ್ಲಿ ದಿನಾಂಕ ಎಂದು ನಮೂದಿಸಿದ ಕಡೆ 04-06-2018 ಇರುತ್ತದೆ. ಆದರೆ ನಿಡಿ-1 ರಲ್ಲಿ ಅದು ಇರುವುದಿಲ್ಲ. ನಿಡಿ-1 ರಲ್ಲಿ ಡಿವೈಎಸ್‌ಪಿ, ಎಸಿಬಿ, ಕೋಲಾರ ಎನ್ನುವ ಸೀಲ್ ಇರುತ್ತದೆ. ಆದರೆ ನಿಪಿ-1 ರಲ್ಲಿ ಇರುವುದಿಲ್ಲ. ನಿಡಿ-1 ದಿನಾಂಕಃ 15-09-2018 ರಂದು ಕಡತದಲ್ಲಿತ್ತು.

ನಾನು ಯಾವತ್ತೂ ಅಕ್ಷಯ ಇಂಟರ್ ನ್ಯಾಷನಲ್ ಶಾಲೆಗೆ ಭೇಟಿ ಕೊಟ್ಟಿಲ್ಲ. ಪುಟ ಸಂಖ್ಯೆ 174 ರಿಂದ 180 ರಲ್ಲಿ ಕಂಡು ಬರುವ ಫೋಟೋಗಳಲ್ಲಿ ಅಕ್ಷರ ಶಾಲೆ, ಶೌಚಗೃಹ, ಆಟದ ಮೈದಾನ ಮತ್ತು ನಿರ್ವಹಣೆ ಚೆನ್ನಾಗಿದೆ ಎಂದು ಕಂಡು ಬರುತ್ತದೆ. ಸದರಿ ಶಾಲೆಯ ಸೆಕ್ರೇಟರಿ ಮಲ್ಲಿಕಾರ್ಜುನರವರು ಗೊತ್ತು. ಪ್ರಾಸಾ-1 ರವರು ನನ್ನನ್ನು ಈ ಕಡತ ಸಂಬಂಧ ಎರಡು ಸಲ ಭೇಟಿಯಾಗಿದ್ದಾರೆ, ಕೆಜಿಎಫ್ ವ್ಯಾಪ್ತಿಯಲ್ಲಿ ಅಂದಾಜು 70 ಖಾಸಗಿ ಅನುದಾನ ರಹಿತ ಶಾಲೆಗಳು ಇರುತ್ತದೆ. 2018 ರಲ್ಲಿ ಪ್ರಾಥಮಿಕ ಶಾಲೆಗಳಿಗೆ ನಮ್ಮ ಬಿಇಓ ಕಛೇರಿಯಿಂದಲೇ ಮಾನ್ಯತೆ ನೀಡಲಾಗುತ್ತಿದೆ. ನಿಪಿ-16 ನಡವಳಿಕೆ ಸಮಯದಲ್ಲಿ ನಾವು ಟಿಪ್ಪಣಿ ಮಂಡಿಸುತ್ತೇವೆ, ಅದನ್ನು ಅಧೀಕ್ಷಕರು ಮತ್ತು ಮ್ಯಾನೇಜರ್ ಪರಿಶೀಲಿಸಿ ಬಿಇಓರವರಿಗೆ ಕಳುಹಿಸುತ್ತಾರೆ. ದಿನಾಂಕಃ 29-10-2018 ರಂದು ಅದನ್ನು ಬಿಇಓಗೆ ಕಳುಹಿಸಿದ್ದಾರೆ. ಖಂಡಿಕೆ-12 ರ ಪ್ರಕಾರ ವ್ಯವಸ್ಥಾಪಕರು ಕೇವಲ ಸಹಿ ಮಾಡಿದ್ದಾರೆ.

ಖಂಡಿಕೆ-12 ರಲ್ಲಿ 30-10 ಎನ್ನುವ ದಿನಾಂಕದ ಪೈಕಿ ಸಂಖ್ಯೆ 3 ನ್ನು ತಿದ್ದಿದಂತೆ ಕಂಡು ಬರುತ್ತದೆ. ನಿಪಿ-16 ನಡವಳಿಕೆ 2018-19 ನೇ ಸಾಲಿಗೆ ಸಂಬಂಧಿಸಿದ್ದು ಎಂದರೆ ಸರಿ. ದಿನಾಂಕಃ 30-10-2018 ರಂದು ಕಡತ ನನ್ನ ಕಡೆಗೆ ಬಂದಿದೆ. ಯಾವ ವರ್ಷಕ್ಕೆ ನವೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ನಮೂದು ಇರಲಿಲ್ಲ. 2018-19 ರಲ್ಲಿ ಅರ್ಜಿ ಸಲ್ಲಿಸಿದರು, ನವೀಕರಣವನ್ನು 5 ಅಥವಾ 6 ವರ್ಷಗಳಿಗೆ, ಯಾವಾಗಲಾದರೂ ಪಡೆಯಬಹುದು. ಐದು ವರ್ಷ ಅಥವಾ ಆರು ವರ್ಷ ಎಂದು ನಮೂದಿಸುವ ಅವಶ್ಯಕತೆ ಇರುವುದಿಲ್ಲ. ಬಿಇಓರವರ ಅಧಿಕಾರ ವ್ಯಾಪ್ತಿಯಲ್ಲಿ ಎಷ್ಟು ವರ್ಷ ಕೊಡಬಹುದು ಎಂದು ಆದೇಶ ಕೊಡುತ್ತಾರೆ. ದಿನಾಂಕಃ 30-10-2018 ಕ್ಕೆ ಫಾರಂ ನಂಬರ್-2 ರಲ್ಲಿ ಆದೇಶ ಮಾಡುವಂತೆ ಖಂಡಿಕೆ ಇರಲಿಲ್ಲ. ದಿನಾಂಕಃ 30-11-2018 ರಂದು ಲೋಕಾಯುಕ್ತರ ವಶಕ್ಕೆ ಕಡತ ಕೊಡಲಾಗಿದೆ. ನಾನು ಖಂಡಿಕೆ 13 ರ ಪ್ರಕಾರ ಇಂತಿಷ್ಟು ವರ್ಷಕ್ಕೆ ನವೀಕರಣ ಮಾಡಿ ಎಂದು ಖಂಡಿಕೆ ಸಲ್ಲಿಸಿಲ್ಲ. ಖಂಡಿಕೆ-16 ರ ಪ್ರಕಾರ 2019-2020 ರವರೆಗೆ ನವೀಕರಿಸಲು ಆದೇಶವಾಗಿದೆ. ದಿನಾಂಕಃ 03-11-2018 ಕ್ಕೆ ಬೆಳಗ್ಗೆ 10-30 ಗೆ ಕಡತ ನನ್ನ ಕಡೆಗೆ ಬಂದಿದೆ. ದಿನಾಂಕಃ 02-11-2018 ರಂದು ಮಧ್ಯಾಹ್ನ ಬಿಇಓ ಕಛೇರಿಗೆ ಕಳುಹಿಸಲಾಗಿದೆ. ನಾನು ಮಧ್ಯಾಹ್ನ ಕಡತವನ್ನು ವ್ಯವಸ್ಥಾಪಕರಿಗೆ ಕಳುಹಿಸಿಕೊಟ್ಟಿದ್ದೇನೆ. ದಿನಾಂಕಃ 31-10-2018 ರಂದು ರಜೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 31-10-2018 ರಂದು ಯಾವುದೇ ನಡವಳಿಕೆ ಆಗಿರುವುದಿಲ್ಲ. ದಿನಾಂಕಃ 31-10-2018 ರಂದು ನಾನು ಕಛೇರಿಗೆ ಹಾಜರಾಗಿದ್ದೆನೋ ಇಲ್ಲವೋ ನೆನಪಿಲ್ಲ. ದಿನಾಂಕಃ 31-10-2018 ರಂದು ಕಡತ ನನ್ನ ವಶದಲ್ಲಿತ್ತು. ದಿನಾಂಕಃ 31-10-2018 ರಂದು ನಾನು ಬೇರೆ ಕಡತಗಳನ್ನು ನೋಡುತ್ತಿದ್ದೆ. ದಿನಾಂಕಃ 30-10-2018 ರಂದು ಫಾರಂ-2 ಬಗ್ಗೆ ಯಾವುದೇ ಆದೇಶ ಆಗಿಲ್ಲ. ಖಂಡಿಕೆ-12 ರಲ್ಲಿ ಯಾವುದೇ ಷರಾ, ಟಿಪ್ಪಣಿ ಬರೆಯದೇ ಬಿಇಓ ಸಹಿ ಮಾಡಿದ ಕಾರಣ, ಅವರು ಒಪ್ಪಿದ್ದಾರೆ ಎಂದು ಭಾವಿಸಿ ಕರಡು ಪ್ರತಿಯನ್ನು ಖಂಡಿಕೆ-13 ರಲ್ಲಿ ಮಂಡಿಸಿದ್ದೇನೆ. ದಿನಾಂಕಃ 02-11-2018 ರವರೆಗೆ ಆರೋಪಿ 2019-2020 ರವರೆಗೆ ಎಂದು ಆದೇಶ ಮಾಡಿಲ್ಲ ಎಂದರೆ ಸರಿ. ದಿನಾಂಕಃ 30-10-2018 ರಂದು ಫಾರಂ-2 ಪುಟ ಸಂಖ್ಯೆ-126 ಮಾಡಲಾಗಿದೆ, ಸಂಜೆ 05-20 ಗಂಟೆಗೆ ಅದನ್ನು ಸಿದ್ಧಪಡಿಸಲಾಗಿದೆ. ಪುಟ ಸಂಖ್ಯೆ-126 ರಲ್ಲಿ ಎಲ್ಲಾ ಸಂಗತಿಗಳನ್ನು ಕಂಪ್ಯೂಟರೀಕರಿಸಿದ್ದು 2019-2020 ನ್ನು ಕೈ ಮೂಲಕ ಬರೆಯಲಾಗಿದೆ ಎಂದರೆ ಸರಿ. ಅದನ್ನು ಬಿಇಓರವರು ಬರೆದಿದ್ದಾರೆ.

ದಿನಾಂಕಃ **02-11-2018** ರಂದು ಬರೆದಿದ್ದಾರೆ, ಸಮಯ ಗೊತ್ತಿಲ್ಲ. ನಾನು ಕಡತವನ್ನು ವ್ಯವಸ್ಥಾಪಕರಿಗೆ ಮದ್ಯಾಹ್ನ **02-30** ಗಂಟೆಗೆ ಕಳುಹಿಸಿದ್ದೇನೆ. ವ್ಯವಸ್ಥಾಪಕರ ಬಳಿ ಕಡತ ಯಾವ ಸಮಯದವರೆಗೆ ಇತ್ತು ಗೊತ್ತಿಲ್ಲ. ಪುಟ ಸಂಖ್ಯೆ**126** ಕರಡು ಪ್ರತಿಗೆ ವ್ಯವಸ್ಥಾಪಕರು, ವಿಷಯ ನಿರ್ವಾಹಕರು, ಅಧೀಕ್ಷಕರು ಸಹಿ ಮಾಡುತ್ತಾರೆ. ನಂತರ ಬಿಇಓ ಕಡೆಗೆ ಕಳುಹಿಸುತ್ತಾರೆ ಎಂದರೆ ಸರಿ. ಪುಟ **126** ನಿಪಿ-**16**(ಎ)ನೇದರಲ್ಲಿ ವ್ಯವಸ್ಥಾಪಕರ ಸಹಿ ಇಲ್ಲ ಎಂದರೆ ಸರಿ. ಪುಟ ಸಂಖ್ಯೆ**126** ರ ಕರಡು ಪ್ರತಿಯಲ್ಲಿ ಕೈಬರವಣಿಗೆಯಲ್ಲಿ ಬರೆದ **19-20** ನನ್ನ ಕೈಬರವಣಿಗೆಯಲ್ಲಿದೆ ಎಂದರೆ ಸರಿಯಲ್ಲ. ನಾನು ಪ್ರಾಸಾ-**1** ಒಳ್ಳೆಯ ಸ್ನೇಹಿತರು ಎಂದರೆ ಸರಿಯಲ್ಲ. ಬಿಇಓರವರು ಪದೇಪದೇ ಪ್ರಾಸಾ-**1** ರವರಿಗೆ ಆಟದ ಮೈದಾನ ಸರಿ ಇಲ್ಲ, ಕಟ್ಟಡ ನಿರ್ವಹಣೆ ಸರಿ ಇಲ್ಲ, ಮೂಲಭೂತ ಸೌಲಭ್ಯಗಳು ಸರಿ ಇಲ್ಲ ಎಂದು ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆಡಿಟ್ ರಿಪೋರ್ಟ್ ಸರಿಯಾಗಿ ಸಲ್ಲಿಸುತ್ತಿಲ್ಲ ಎಂದು ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಪ್ರಾಸಾ-**1** ರವರಿಗೆ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ. ಬಿಇಓರವರು ಆಡಿಟ್ ವರದಿ ಇಲ್ಲ ಎಂದು ಷರಾ ಬರೆದಿದ್ದಾರೆ. ಆ ಬಗ್ಗೆ ಯಾವುದೇ ನೋಟೀಸನ್ನು ಕೊಟ್ಟಿಲ್ಲ. ಪ್ರಾಸಾ-**1** ನಮ್ಮ ಕಛೇರಿಗೆ ಬಂದಾಗ ನಾನೇ ಮೌಖಿಕವಾಗಿ ಅವರಿಗೆ ತಿಳಿಸಿದ್ದೇನೆ. ಪ್ರಾಸಾ-**1** ನನಗೆ ಯಾವುದೇ ವರದಿ ನೀಡಿಲ್ಲ.

ನಾನು ಪ್ರಾಸಾ-**1** ರವರೊಂದಿಗೆ ಶಾಮೀಲಾಗಿ ಆರೋಪಿಯ ವಿರುದ್ಧ ಬನಾವಟ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನನಗೆ ಕರಡು ಪ್ರತಿಯ ಶುದ್ಧ ಪ್ರತಿ ತಯಾರಿಸಿ ಎಂದು ದಿನಾಂಕಃ **03-11-2018** ರಂದು ಮದ್ಯಾಹ್ನ **01-00** ಗಂಟೆಗೆ ನನಗೆ ಹೇಳಿದ್ದಾರೆ. ಅದರ ನಂತರ ಎರಡು ಗಂಟೆಯ ಒಳಗೆ ಆರೋಪಿ ಟ್ರಾಪ್ ಆದ ಕಾರಣ ಶುದ್ಧ ಪ್ರತಿ ತಯಾರಿಸಿಲ್ಲ ಮತ್ತು ಆ ದಿನ ಕಛೇರಿಯಲ್ಲಿ ವಿದ್ಯುತ್ ಸರಬರಾಜು ಇರಲಿಲ್ಲ. ಬೆಳಗ್ಗೆ **10-30** ಗೆ ಹೋದ ಕರೆಂಟ್ ಮದ್ಯಾಹ್ನ **03-00** ಗಂಟೆಯವರಿಗೂ ಬರಲಿಲ್ಲ.

ಬಿಇಓ ಕಛೇರಿ ಪೂರ್ವ ಪಶ್ಚಿಮ **80** ಅಡಿ, ಉತ್ತರ ದಕ್ಷಿಣ **20-25** ಅಡಿ ಇರಬಹುದು. ಸದರಿ ಕಟ್ಟಡಕ್ಕೆ ಮೂರು ಪ್ರವೇಶ ಬಾಗಿಲುಗಳು ಇವೆ. ಬಿಇಓ ಕೊಠಡಿಯಲ್ಲಿ ಬೀರುಗಳನ್ನು ಇಟ್ಟು ಅವರಿಗೆ ಛೇಂಬರ್ ನಿರ್ಮಾಣ ಮಾಡಲಾಗಿದೆ. ಅಂದಾಜು **3-4** ಬೀರುಗಳು ಇರಬಹುದು.

ಬಿಇಓ ಛೇಂಬರ್-ಗೆ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಕಿಟಕಿಗಳು ಇವೆ. ಬಿಇಓ ಛೇಂಬರ್ 30 ಇಂಟು 25 ಇರಬಹುದು. ಬಿಇಓ ಛೇಂಬರ್-ನಲ್ಲಿ ಯಾವುದೇ ಕ್ಲರ್ಕ್ ಕುಳಿತುಕೊಳ್ಳುವುದಿಲ್ಲ. ಅವರು ಕೂರುವ ಜಾಗೆಗೂ ಕಿಟಕಿಗೂ ಸುಮಾರು 4 ಅಡಿ ಅಂತರ ಇರಬಹುದು. ನಿಪಿ-30 ರಲ್ಲಿ ಬಿಇಓ ಛೇಂಬರ್ ಕಂಡು ಬರುತ್ತದೆ. ಆರೋಪಿ ಹತ್ತು ಸಾವಿರ ಲಂಚದ ಹಣ ಪಡೆಯುವಾಗ ಎಸಿಬಿ ಅಧಿಕಾರಿಗಳಿಗೆ ಸಿಕ್ಕಿ ಬಿದಿದ್ದಾರೆ ಎಂದು ತಿಳಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಬಿಇಓ ಸುರೇಶ್ ರವರು ತಾನು ಆದೇಶ ಮಾಡುವವರೆಗೆ ಕಡತ ನನ್ನ ಬಳಿ ಇಟ್ಟುಕೊಳ್ಳಿ ಎಂದು ಹೇಳಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಾಸಾ-1 ರವರೊಂದಿಗೆ ಶಾಮೀಲಾಗಿ ಆರೋಪಿಗೆ ತೊಂದರೆ ಕೊಡಲು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ, ದಿನಾಂಕ ನೆನಪಿಲ್ಲ.

<u>ಮರು ವಿಚಾರಣೆಃ</u> ವಿಶೇಷ ಸಾರ್ವಜನಿಕ ಅಭಿಯೋಜಕರಿಂದ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

(ಮಂಜುನಾಥ ಜಿ.ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.